**ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು, ಹುಣಸೂರು ಪೀಠ.**

**SC No**.202/2021

**PW**. 2

**CW**. 2

**ಸಾಕ್ಷಿಯ ಹೆಸರು -ಜಯಣ್ಣ**

**ತಂದೆಯ ಹೆಸರು -ಸುಬ್ರಮಣ್ಯ**

**ವಯಸ್ಸು -35 ವರ್ಷಗಳು**

ದಿನಾಂಕ 09-10-2024 ರಂದು ಪ್ರಮಾಣವಚನ ಬೋಧಿಸಲಾಯಿತು.

**ಉದ್ಯೋಗ -ವ್ಯವಸಾಯ**

**ವಾಸಸ್ಥಳ -ಸಣ್ಣೇಗೌಡರ ಕಾಲೋನಿ, ಹುಣಸೂರು ತಾಃ**

**ಮುಖ್ಯ ವಿಚಾರಣೆಃ- ಸರ್ಕಾರಿ ಅಭಿಯೋಜಕರಿಂದಃ-**

ಚಾಸಾ-1 ನನ್ನ ಸಹೋದರ. ಚಾಸಾ-3 ನನ್ನ ಅತ್ತಿಗೆ. ಆರೋಪಿತರು ನಮ್ಮ ಊರಿನವರಾದ ಕಾರಣ ಗೊತ್ತು. ದಿಃ 18-04-2020 ರಂದು ಬೆಳಗ್ಗೆ 6.00 ಗಂಟೆ ಸಮಾರಿಗೆ ನಾನು ಗದ್ದೆಗೆ ಹೋಗುವಾಗ, ಆರೋಪಿತರು ನನ್ನ ಜೊತೆ ಜಗಳ ಮಾಡಿ, 2 ರಿಂದ 5 ನೇ ಆರೋಪಿತರು ನನ್ನನ್ನು ಹಿಡಿದುಕೊಂಡಿದ್ದರು. 1 ನೇ ಆರೋಪಿ ಅವರ ಮನೆಯಿಂದ ಒಂದು ಮಚ್ಚನ್ನು ತೆಗೆದುಕೊಂಡು ಬಂದು, ನನ್ನ ತಲೆಗೆ ಹೊಡೆದ. 1 ನೇ ಆರೋಪಿಯು ಅದೇ ಮಚ್ಚಿನಿಂದ ನನ್ನ ಸೊಂಟಕ್ಕೆ ಹೊಡೆದು ಕೊಲೆ ಮಾಡಲು ಪ್ರಯತ್ನಪಟ್ಟ .ಆಗ ನಾನು ಕಳೆಗೆ ಬಿದ್ದರು. ಚಾಸಾ-1, 3 ಹಾಗೂ 4 ರವರು ಜಗಳ ಬಿಡಿಸಿ, ಚಾಸಾ-5 ರವರು ನನ್ನನ್ನು ಆಸ್ಪತ್ರೆಗೆ ಕರೆದುಕೊಂಡು ಹೋದರು. ನಂತರ ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಕೆ ಆರ್ ಆಸ್ಪತ್ರೆಗೆ ನನ್ನ ತಾಯಿ ಮತ್ತು ಇತರರು ಕರೆದುಕೊಂಡು ಹೋದರು. ನನ್ನ ತಲೆಗೆ ಮತ್ತು ಸೊಂಟದ ಎಡಭಾಗಕ್ಕೆ ಗಾಯವಾಗಿತ್ತು. ಆಗ ಚಾಸಾ-1 ರವರು ನಮ್ಮ ಊರಿನ ಸುನೀಲ್ ನಿಂದ ಒಂದು ದೂರನ್ನು ಬರೆಸಿಕೊಂಡು, ಫಿರ್ಯಾದಿಯನ್ನು

ನೀಡಿರುತ್ತಾರೆ. ಮೈಸೂರಿನ ಕೆ ಆರ್ ಆಸ್ಪತ್ರೆಗೆ ನನ್ನ ತಾಯಿ ಮತ್ತು ಇತರರು ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಿ , ನಂತರ ಹುಣಸೂರು ಆಸ್ಪತ್ರೆಗೆ ಕರೆದುಕೊಂಡು ಹೋದರು. ಹುಣಸೂರು ಆಸ್ಪತ್ರೆಯಲ್ಲಿ ಒಂದು ವಾರದವರೆಗೆ ದಾಖಲಾಗಿದ್ದೆ . ಘಟನೆಗೆ 3 ದಿನಗಳ ಮುಂಚೆ ನಮ್ಮ ನಾಯಿ ಆರೋಪಿತರು ಸಸಿಗಳ ಟ್ರೇ ತುಳಿದಿದ್ದ ಕಾರಣ ಆರೋಪಿ ನಾಯಿಯ ಕಾಲು ಮುರಿದು ಹಾಕಿದ್ದ.ಅ ಸಂಬಂಧವಾಗಿ ಆರೋಪಿತರು ದ್ವೇಷ ಸಾಧಿಸಿ ನನಗೆ ಹಲ್ಲೆ ಮಾಡಿರುತ್ತಾರೆ.

1 ನೇ ಆರೋಪಿ ನನಗೆ ಹಲ್ಲೆ ಮಾಡಿದ ಮಚ್ಚನ್ನು ನೋಡಿದರೆ ಗುರುತಿಸುತ್ತೇನೆ. ಈಗ ನ್ಯಾಯಾಲಯದ ಮುಂದೆ ನೋಡುತ್ತಿದ್ದು , ಅದನ್ನು ಈಗಾಗಲೇ ಮು.ಮಾ–1 ಗುರುತಿಸುತ್ತೇನೆ. ಟವೆಲ್ ಅನ್ನು ಈಗಾಗಲೇ ಮು.ಮಾ–2 ಗುರುತಿಸಲಾಯಿತು. ಈ ಮೊದಲು ಆರೋಪಿರಿಗೂ ಹಾಗೂ ನಮಗೂ ಯವ್ರೂದೇ ತಂಟೆ ಇರಲಿಲ್ಲ.

**ಪಾಟೀಸವಾಲುಃ– ಆರೋಪಿತರ ಪರ ಶ್ರೀ ಆರ್ ಎಸ್ ಎಂ ವಕೀಲರಿಂದಃ–**

ಆರೋಪಿ ಪರ ವಕೀಲರ ಕೋರಿಕೆಯ ಮೇರೆಗೆ ಪಾಟೀಸವಾಲನ್ನು ರೂ. 1000/– ವೆಚ್ಚದ ಮೇರೆಗೆ ಮುಂದೂಡಲಾಯಿತು.

**ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

ಓ ಹೇ ಕೇ ಸರಿ ಇದೆ ಎಂದು ಒಪ್ಪಿದ ಮೇರೆಗೆ,

ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು, ಹುಣಸೂರು ಪೀಠ.